Regd. No. M. 1550.
"KODAGU" MERCARA, (Coorg).

ಕೊಡಗು

ಸಂಪಾದಕರು:—ಶ್ರೀ ಪಿ. ಬಿ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩—೮—೦.

ಸಂಪುಟ ೨೪ | ತಾರೀಕು ೧೮—೮—೧೯೪೪ನೇ ಶುಕ್ರವಾರ. | ಸಂಚಿಕೆ ೧೧

ಹಿಂ ಟ್ಲ ರ್.

ಜರ್ಮನಿಯೊಳಗಿನ ಇಂದಿನ ಸ್ಥಿತಿ ನೋನು? ನಿಜಸ್ಥಿತಿ ತಿಳಿವುಯುದು ಕಷ್ಟ ಊಹನೆ ಹೆಚ್ಚು. ತಟಸ್ಥ ದೇಶವಾದ ಸ್ವೀಡನಿಗೂ ತಲಪುವ ವಾರ್ತೆಗಳು ಅಸ್ಪಷ್ಟವೇ ಇವೆ. ಆದರೂ, ಸ್ವೀಡನಿನಿಂದ ಸಂಗ್ರಹಿಸಿ ತಂದ ಕೆಲವೊಂದು ವಿಷಯಗಳು, ವಿಶೇಷವಾಗಿ, ಹಿಟ್ಲರರ ಮಾನೋಸ್ಥಿತಿಯ ಕಥೆಯೊಂದು, ಲಂಡನಿನ 'ಡೈಲಿ ಟೆಲಿಗ್ರಾಫ್' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಸ್ಟೊಕ್ಹೋಮಿನಿಂದ ಆ ಪತ್ರಿಕಾ ಬಾತ್ಮೀದಾರರು ತೆಗೆದ ವಿಷಯಗಳಿವು:—

ಹಿಟ್ಲರ್ ಆ ಯಮಸ್ವರೂಪಿ—ಜರ್ಮನಿಯಲ್ಲಿ, ಜನತೆಯ ಹೃದಯದಲ್ಲಿ ಭೀತಿಯನ್ನು ನೆಟ್ಟು, ಆಳುತಿದ್ದಾನೆ ಇವನ ಅಳ್ವಿಕೆಯಲ್ಲಿ ಉಸಿರೆತ್ತುವವರಿಲ್ಲ; ಗೊಣಗುಟ್ಟುವವರಿಲ್ಲ. ಇದರಿಂದ ಜರ್ಮನಿಯಲ್ಲಿ, ತೋರಿಕೆಗು ಮಟ್ಟಿಗೆ ಶಾಂತಿ ಹಡಿರದೆ.

ಹಿಟ್ಲರರ ಕೊಲೆಯ ಯತ್ನದ ನಂತರ ಉಳಿದ ಜರ್ಮನ್ ಸೇನಾಧಿಪತಿಗಳು ಮತ್ತು ಅಫೀಸರರು ಇವರೊಳಗೆ ಐಕ್ಯವಿರುವುದೆಂದು ಹೇಳಲಾಗದು. ಜರ್ಮನಿಯಿಂದ ತಪ್ಪಿಸಿ ಬಂದೋರ್ವನ ವದಂತಿಯಂತೆ, ಜರ್ಮನಿಯೊಳಗೆ, ಸ್ಟಾಲಿನ್‌ಗ್ರಾಡ್ ದುರಂತದ ಕಾಲದಲ್ಲಿ ಜನರಲ್ಲಾದ ಸ್ಥೈರ್ಯಭಂಗಕ್ಕಿಂತಲೂ ಎಷ್ಟೋ ತೀವ್ರವಾದ ಪರಿಣಾಮವು ಈಗ ಉಂಟಾಗಿದೆ

ಸ್ವೀಡನಿನ ಒಬ್ಬ ಪ್ರಯಾಣಿಕನು, ಬರ್ಲಿನಿನಿಂದ ಸ್ಟೊಕ್ಹೋಮಿಗೆ ಮರಳಿರುವನು. ಆತನು ಜರ್ಮನ್ ಆಫೀಸರೊಬ್ಬನೊಡನೆ ಮಾತಾಡಿ ತಿಳಿದಂತೆ, ಹಿಟ್ಲರನ ಒಂದು ಚಿತ್ರ ಈ ರೀತಿಯಿದೆ:

ಹಿಟ್ಲರರಿಗೆ, ತನ್ನ ಆತ್ಯಂತ ವಿಶ್ವಾಸವು ಅನುಯಾಯಿಗಳಲ್ಲಿದೆ ಜೊರಬರುವುದಿಲ್ಲ. ಈ ಅನುಯಾಯಿಗಳನ್ನು ಹಿಮ್ಲರರೇ ಆಯ್ಕೆಮಾಡುವರು. ಗೋರಿಂಗ್, ರಿಬನ್‌ಟ್ರಾಪ್, ಮುಸಲಿನಿ, ಜೊಡ್ಲ್, ಜೊಡನ್‌ಶಾಂಗ್ಲ್, ಶ್ಮಂಡ್ಟ್ ಇಂತಹ ಪ್ರಸಿದ್ಧ ನಾಮಗಳು ಮುಖಂಡನಿಗೆ ನೂತ್ರ ಹಿಟ್ಲರರ ಜೊತೆಯಡಿಗೆ ಪ್ರವೇಶವಿದೆ. ಏನಾದರೊಂದು ಅಪೀಶಿಯಲ್ ಸಮಾರಂಭದಲ್ಲಿ, ಹಿಮ್ಲರರ ಎಸ್. ಎಸ್. ದಳದವರು ಹಿಟ್ಲರರ ಕಾವಲುಮಾಡುತ್ತಿರುವರು.

ಅನೇಕ ತಿಂಗಳಿಂದ ಹಿಮ್ಲರರು, ಹಿಟ್ಲರನಂತೇ ತೋರುವವರಾರನ್ನಾದರೂ ಅಫೀಶಿಯಲ್ ಸಮಾರಂಭಗಳಲ್ಲಿ ಉಪಯೋಗಿಸಿದ್ದಾರೆ. ನೊನ್ನಿನ ಬೋಂಬ್ ಸ್ಫೋಟನದಲ್ಲಿ ಕೊಲ್ಲಲ್ಪಟ್ಟ ಬರ್ಜರ್ ನಾಮಾಂಕಿತ ಮನುಷ್ಯನು ಇಂತಹ ಹೊಟ್ಟ ನಕಲಿ ಹಿಟ್ಲರ್! ಇವನನ್ನು ಅನೇಕ ಸಮಾರಂಭಗಳಲ್ಲಿ, ಹಿಟ್ಲರರ ಬದಲಿಗೆ ಉಪಯೋಗಿಸಿದ್ದರು. ಹಿಮ್ಲರರು ಆರಿಸಿರುವ ಆ ಕೃತಕ ಹಿಟ್ಲರನಾರು? ನಿಜ ಹಿಟ್ಲರನಾರು? ಎಂದು, ಇಂದು ಜರ್ಮನಿಯಲ್ಲಿ ಅನೇಕರಿಗೆ ಹೇಳಬಹುದುದಿಲ್ಲ. ಹಿಟ್ಲರರ ಜತೆಯಲ್ಲಿ ಸದಾ ಇರುವ ರಿಬನ್‌ಟ್ರಾಪ್, ಗೋರಿಂಗ್, ಜೊಡ್ಲ್ ಇವರೇ ತಿಳಿವರೂ ಪೂರ್ತ ಹೇಳಬಲ್ಲರು. ಅಫೀಸರರಿಗೆ ಪದಕಗಳನ್ನು ಕೊಡುವುದೇ ಮೊದಲಾದ ಸಮಾರಂಭಗಳಲ್ಲಿ, ಆ ಗತ ಬರ್ಜರನೇ ಹಿಟ್ಲರರ ಜಾರ್ಟುಮೊಡಿದ್ದನು. ಅಭಿನಂದನಾ ಪಂಕ್ತಿಗಳನ್ನು ಹೇಗೂ ಉಚ್ಚರಿಸಿದ್ದನು.

ಸಾರ್ವಜನಿಕ ಸಮಾರಂಭಗಳಲ್ಲಿ ಹಿಮ್ಲರರು, ಹಿಟ್ಲರರ ರಕ್ಷಣೆ ಬಗ್ಗೆ ತಮ್ಮ ಕಾವಲುಗಾರರ ಮೇಲೇ ಅವಲಂಬಿಸಿರುವರು. ಮತ್ತು ಸಮಯದಲ್ಲಿ ಫಕ್ಕನೆ ಬಬಲಾವಣೆ ತೂಡಿಬಿಡುವರು. ಹಿಟ್ಲರರಿಂದು, ತಮ್ಮ ಅನುಯಾಯಿಗಳಿಗೆ ಕಷ್ಟತರವಾಗಿರುವರು. ಸಿಡುಕು ಹೆಚ್ಚಿದೆ; ಹತೋಟಿಗೆ ಬರಲಾರದಂತಹ ಸಿಡುಕು. ಅವರ ಮೂತಿಗೆ ಪ್ರತಿಯೂಡುವುದಿರಲಿ; ಪೂಜನೆಗಳನ್ನು ಕೂಡ ಅವರು ಸಹಿಸಲಾರರು.

ಹಿಟ್ಲರರ ಪ್ರೀತಿಯುವರೇ ತಮ್ಮನ್ನು ಹತೋಟಿಯಲ್ಲಿ ಇಟ್ಟುಕೊಳ್ಳಲಾರರೆ. ತಾನೇ ಸರ್ವಸ್ವನೆ, ಸರ್ವಶಕ್ತನು, ಸರ್ವಜ್ಞನು—ಎಂದು ಹಿಟ್ಲರರೆಣಿಸುತ್ತಾರೆ. ಈ ಭಾವನೆ ಬೆಳೆಯುತ್ತಿದೆ.

ಹಿಟ್ಲರರು ಅಪಜಯವು ಒರುವುದೆಂದು ನಂಬುವುದಿಲ್ಲ ಇಂದಿನ ಸ್ಥಿತಿಯನ್ನು ಪೂರ್ಣಹಿಸಿ ಜರ್ಮನಿಗೆ ಜಯವನ್ನು ತರಬಲ್ಲನೆಂದು ದೃಢವಾಗಿ ನಂಬಿರುವರು.

ಹಿಟ್ಲರರ ಅತ್ಯಾಪ್ತರಿವರಿಬ್ಬರ :— ಅಂಗರಕ್ಷಕ ಹಿಮ್ಲರ್; ವಿದೂಷಕ ಲೇ. ಪ್ರಭಾತ.

ಟೋಜೋ.

'ಟೋಜೋ'—ಈ ಹೆಸರನ್ನು ಕೇಳುತ್ತಲೇ ಒಬ್ಬನಿಗೆ, ತಂತ್ರ—ಛಲ—ಕೆಚ್ಚಿದೆ ಇದುವೇ ಹೊಳೆವುದು. ಜಪಾನಿನ ಯುದ್ಧವನ್ನು ಜರ್ಮನಿಗಿಂತ ಬಿರುಸಾಗಿ ಸಾಗಿಸಿ, ಕೆಲವೇ ತಿಂಗಳೊಳಗೆ ಪೆಸಿಫಿಕ್‌ದೊಳಗಿನ ವಿದೇಶೀ ಸಾಮ್ರಾಜ್ಯವನ್ನು ಕಸಿದುಕೊಂಡು, ಬಲಾಢ್ಯ ಅಮೇರಿಕವು ಕಣ್ಣಾರಳಿಸಿ ಮುಂಕನಂತೆ ನೋಡುವಂತೆ ಮಾಡಿದವ ಟೋಜೋ.

ಟೋಜೋವನ್ನು 'ಹೇರುರ್' ಎಂಬ ಉಪನಾಮದಿಂದ ಕರೆವುದೂ ಇದೆ. ಟೋಜೋ 1941 ನೇ ಅಕ್ಟೋಬರದಲ್ಲಿ, ಪರಸಾಮ್ರಾಜ್ಯವನ್ನು ಕತ್ತು ಕೊಳ್ಳುವ ಕಾರ್ಯಕ್ಕೆ ಜಜ್ಜಲ್ಪಟ್ಟರು. ಬ್ರಿಟೈನ್ ಮತ್ತು ಅನೇರಿಕಕ್ಕೆ ಸ್ನೇಹದ ಕೈಯನ್ನು ನೀಡುತಿದ್ದಂತೆ, ಮತ್ತೊಂದು ಕೈಯಿಂದ ತಿವಿದು ಯುದ್ಧ ಹೂಡುವ ಮಹಾಕಾರ್ಯ ಟೋಜೋ ಆರಂಭಿಸಿದರು. ಜಗತ್ತೇ, ಜಪಾನಿನ ವಿಜಯ ನೋಡಿ ವಿಸ್ಮಯಗೊಂಡಿತು. ಈಗ?

ಟೋಜೋ, ಪ್ರಧಾನ ಪೀಠದಿಂದ ಕೆಳಗುರುಳಿರುವರು.

ನಿಕಾಡೋ (ಜಪಾನ್ ಚಕ್ರವರ್ತಿ) ಜಪಾನಿನ ಇಂದಿನ ಸ್ಥಿತಿಗೆ ನೆಮ್ಮದಿಯುವರೇ? ಜನತೆ ಯೋಜನೆಗೀಡಾಗಿದೆಯೆ? ಹೇಳುವುದು ಸಾಧ್ಯವಿಲ್ಲ. ಜಪಾನರ ದೇಶಪ್ರೇಮವನ್ನು ಪ್ರಶ್ನಿಸುವವರಾರೂ ಇಲ್ಲ; ಜಪಾನರ ಕೆಚ್ಚಿದೆಯನ್ನು ದ್ವಿತೀಯ ಸ್ಥಾನಕ್ಕೆ ತಳ್ಳುವವರಿಲ್ಲ; ಜಪಾನರ ಛಲವನ್ನು ಕಡಿಮೆಯೆನ್ನುವವರಿಲ್ಲ. ಚಕ್ರವರ್ತಿಯು ನೋವಾಗಲಿ ಜನರ ಅಸಂತೋಷದಾಗಲಿ ಟೋಜೋ ಪತನಕ್ಕೆ ಕಾರಣವಲ್ಲ. ಏಕೆ?

ಕೆಲವರನ್ನಾಡುವಂತೆ: ಜಪಾನ್ ಚಕ್ರವರ್ತಿಗೆ ಕಡಿಮೆಂತ ಹೆಚ್ಚಿನ ಅಧಿಕಾರವಿಲ್ಲ. ಜಪಾನನ್ನು ಆಳುವವರೆಂದರೆ, ರಾಜಗೃಹದ ಕಾಯಂ ಸೇವಕರು, ಹಿರಿಯ ರಾಜಕಾರಣಿಗಳು ಮತ್ತು ಮಿಲಿಟರಿ. ಇವರೆಲ್ಲ ಕೂಡಿ ಜಪಾನಿನ ಗುಪ್ತಪಕ್ಷದ ಬೆನ್ನೆಲುಬೆನಿಸಿರುವರು. ಟೋಜೋ ಇದರಲ್ಲಿ ಒಪ್ಪ ಪ್ರಮುಖ ಸದಸ್ಯರಾಗಿದ್ದವರು. ಟೋಜೋ ಮೇಲೆ ಇವರ ಭರವಸೆ ಕಡಿಮೆಯಿತು.

ಟೋಜೋ, ಯುದ್ಧವನ್ನಾರಂಭಿಸಿದ ರೀತಿಯು ಜಪಾನಿಗೆ ತೃಪ್ತಿಕರವಿತ್ತು. ಎದುರಾಳಿಗಳಿಲ್ಲವೆಂಬಂತೆ ಜಪಾನ್ ಸೈನ್ಯವು ವಿಜಯಿಯಾಗಿ ಸಾಗಿತು. ಜಪಾನಿನ ಸಾಮ್ರಾಜ್ಯ ವಿಸ್ತರಣೆಗೆ ಟೋಜೋ ತಳಹದಿ ಹಾಕಿದರು. ಆದರೆ, ಇತ್ತೀಚೆಗಿನ ಪರಿಸ್ಥಿತಿಯು 'ಜನತೆಯ ವಿಶ್ವಾಸವನ್ನು ಕುಲುಕಿಸಿಬಿಟ್ಟಿತು.

ಕಳೆದೆರಡು ವರ್ಷಗಳಿಂದ ಜಪಾನಿಗೆ ಎಲ್ಲಿಯೂ ಜಯವಿಲ್ಲ. ಈಗ, ಸೈಪಾನ್ ದ್ವೀಪವು ಅವರಿಂದ ಕಸಿದುಕೊಳ್ಳಲಟ್ಟಿತು. ಈ ದ್ವೀಪವು ಟೋಕಿಯೋದಿಂದ ಕೇವಲ 1500 ಮೈಲು ದ್ದೂರವಿದೆ; ಸೂಪರ್ ಬೋಂಬರ್ ಹೋಗಿ ದಾಳಿ ಮಾಡುವಂತಹ ಅಂತರದಲ್ಲಿದೆ. ಈ ದ್ವೀಪವು ಜಪಾನ್ ಮತ್ತು ಟ್ರುಕ್‌ಗಳ ನಡುವೆ ಇರುತ್ತದೆ. ಫಿಲಿಪಾಯನ್ಸ್‌ಗಳಿಗೂ ಸಮೀಪ. ಈ ಸೈಪಾನ್ ಸೋಲು ಟೋಜೋರವರಿಗೆ 'ಪೂರ್ಣವಿರಾಮ' ಬರೆದುಬಿಟ್ಟಿತು.

'ಪ್ರಭಾತ'

ಜಪಾನ್ ನೌಕಾ ಪಡೆಯ ಪಾತ್ರ.

ಜಪಾನಿನ ಸುತ್ತಮುತ್ತಲಿನ ಸಮುದ್ರ ಭಾಗಕ್ಕೆ ಮಿತ್ರ ಸೈನ್ಯಗಳು ಬಂದಾಗ, ಜಪಾನ್ ದ್ವೀಪ ಸ್ತೋಮಕ್ಕೆ ಅಪಾಯವು ತಲೆದೋರಿದಾಗ ಮಾತ್ರ ಜಪಾನೀ ನೌಕಾ ಪಡೆಯು ಕದನಕ್ಕೆ ಹೋಗುವದು ಎಂಬುದಾಗಿ ಜಪಾನೀ ಬ್ರಾಡ್ ಕಾಸ್ಟಿನಲ್ಲಿ ತಿಳಿಸಲಾಯಿತು. ಶಾಂತಸಾಗರದಲ್ಲಿ ಅಮೇರಿಕವರು ರಕ್ಷಣಾ ನಿಲ್ದಾಣಗಳನ್ನೇರ್ಪಡಿಸಿಕೊಂಡು ಜಪಾನಿನ ಮೇಲೆ ವಿಮಾನದಾಳಿ ನಡಿಸಲು ಏರ್ಪಾಡು ಮಾಡುತ್ತಿರುವ ಆಂತರ್ಯವನ್ನು ಜಪಾನೀ ಬ್ರಾಡ್‌ಕಾಸ್ಟಿನಲ್ಲಿ ಪ್ರಸ್ತಾಪಿಸುತ್ತಾ ಪೂರ್ವ ಮತ್ತು ದಕ್ಷಿಣ ಚೀನಾಗಳ ಸರಬರಾಜು ಮಾರ್ಗಗಳ ಮೇಲೂ ಹಾಂಗ್ಕೆ, ಹಾಂಕಾಂಗ್, ಸಿಂಗಾಪುರ ಮತ್ತು ಸುರಬಾಯಗಳ ಸಮುದ್ರ ಮಾರ್ಗಗಳ ಮೇಲೂ ನೇರವಾದ ಧಾಳಿಯು ಯಾವಾಗ ನಡೆಯುವುದೋ ಆಗಲೇ ಅದರಿಂದ ತೊಂದರೆಯು ಉಂಟಾಗುವದೆಂದು ತಿಳಿಸಿದೆ.

—೦೦—

ಶ್ರೀ ದಿವಾಕರರ ಬಂಧನ.

ಶ್ರೀಮಾನ್ ದಿವಾಕರ ರಂಗಾಯರು ತಾ. 8 ರಲ್ಲಿ ಮಂಜಾನೆ ಹುಬ್ಬಳ್ಳಿಯಲ್ಲಿರುವಾಗ ಪೋಲೀಸ್ ಸಬ್ ಇನ್ಸ್‌ಪೆಕ್ಟರರು ಬಂದು ಅವರನ್ನು ಬಂಧಿಸಿ ಕರೆದುಕೊಂಡು ಹೋದರು. ಶ್ರೀ ದಿವಾಕರರ ಅನೇಕ ಮಿತ್ರರೂ ಇನ್ನಿತರರೂ ಅವರನ್ನು ಬೀಳ್ಕೊಟ್ಟರು. ಶ್ರೀ ದಿವಾಕರರು 1942ನೇ ಆಗಸ್ಟ್ 9ರಿಂದ ಕಾಣೆಯಾಗಿದ್ದರು.

—೦೦—

ಶ್ರೀ ಅಂಬಲಿಯವರ ಬಂಧನ.

ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಕಮಿಟಿಯ ಸೆಕ್ರೆಟರಿಗಳಾದ ಶ್ರೀ ಜೆನ್ನಬಸಪ್ಪ ಅಂಬಲಿಯವರು ತಾ. 7ರ ರಾತ್ರಿ 1 ಗಂಟೆಗೆ ಅವರ ಮನೆಯಲ್ಲಿ ಬಂಧಿಸಲ್ಪಟ್ಟರು. ಇವರು 1942ನೇ ಆಗಸ್ಟಿನಿಂದ ಕಾಣೆಯಾಗಿದ್ದರು.

ಕೊಡಗು

ತಾ. ೧೮-೮-೪೪ಳನೇ ಶುಕ್ರವಾರ

ಹೊಸ ಧಾಳಿ.

ಮಿತ್ರ ಸೇನೆಗಳು ಹೊಸ ಧಾಳಿಯೊಂದನ್ನು ತಾ. 17ರಲ್ಲಿ ಪ್ರಾರಂಭಿಸಿದ್ದಾರೆ. ಭೂಮಧ್ಯ ಸಮುದ್ರ ನೂರ್ಗವಾಗಿ ದಕ್ಷಿಣ ಫ್ರಾನ್ಸಿನಲ್ಲಿ ಬಹುಸಂಖ್ಯೆಯಿಂದ ಜಿಂದಿಳಿದಿದ್ದಾರೆ. ಮೂರ್ಸೆಲ್ಸ್ ನಗರದಿಂದ ಹಿಡಿದು ಟೌಲನ್ ಬಂದರವನ್ನು ದಾಟಿ ಒಟ್ಟಾರೆ 120 ಮೈಲುಗಳ ಕರಾವಳಿಯಲ್ಲಿ ಇವರು ಸ್ಥಾಯಿಯಾಗಿ ನಿಂತಿದ್ದಾರೆ. ಈ ವಿಶಾಲವಾದ ಕಾರ್ಯಕ್ರಮವು ಮಿತ್ರರ ಈ ವರೆಗಿನ ಸಾಹಸ ಕೃತ್ಯಗಳಿಗೆ ತಿಲಕವಿಟ್ಟಾಯವಾಗಿದೆ. 1943ರಲ್ಲೇ ಈ ಧಾಳಿಯನ್ನು ಯೋಚಿಸಲಾಗಿತ್ತಂತೆ. ಸಿಸಿಲಿ ದ್ವೀಪದಿಂದ 1943ನೇ ಸೆಪ್ಟೆಂಬರಿನಲ್ಲಿ ಯೇ ಮಿತ್ರ ಸೇನೆಗಳು ಸಾರ್ಡಿನಿಯೂ ಮತ್ತು ಕೋರ್ಸಿಕಾ ದ್ವೀಪಗಳಲ್ಲಿ ಜಂ ದಿಳಿದಿದ್ದವು. ಈ ವರೆಗೆ ಸಮಯ ಸಾಧಿಸಿ ಇದೀಗ ಫ್ರಾನ್ಸಿಗೆ ಕಾಲಿಕ್ಕಿದರು. ವಿಷಮ ಕೊಡೆಗಳ ಮೂಲಕ ಜರ್ಮನ್ ರಕ್ಷಾ ಕೋಟೆಯನ್ನು ದಾಟಿ ಒಳ ಪ್ರದೇಶದಲ್ಲಿ ಸೇನೆಗಳು ಇಳಿದಿವೆ. ಹೀಗೆ ಇಳಿಯುವ ಮೊದಲು ಅಖಂಡ ಬಾಂಬು ಧಾಳಿಯನ್ನು ಮಾಡಲಾಗಿತ್ತು. ಮಿತ್ರರ ಈ ಮುಷ್ಕಡಿಯನ್ನು ನೋಡಿ ಫ್ರೆಂಚ್ ಸೇನೆಗಳು ಸಹ ಅವರೊಡನೆ ಸಹಕರಿಸುತ್ತಿವೆಯಂತೆ. ಜರ್ಮನ್ ಅಧಿಕಾರಿಗಳ ಮೇಲೆ ಬಂಡಾಯವೆದ್ದು ಈ ಜನರು ಮಿತ್ರರ ಪಂಗಡಕ್ಕೆ ಸೇರಿಕೊಳ್ಳುತ್ತಿದ್ದಾರಂತೆ.

ಮಿತ್ರರು ಇಲ್ಲಿಳಿದ ಧ್ಯೇಯವೆಂದರೆ ಹಾಗೆಯೇ ಮುಂದೊತ್ತಿ ಉತ್ತರ ಫ್ರಾನ್ಸಿನಲ್ಲಿ ಯುದ್ಧ ಮಾಡುತ್ತಿರುವ ಮಿತ್ರ ಸೇನೆಗಳನ್ನು ಕೂಡುವದು. ಹೀಗಾದರೆ ಇಡೀ ಫ್ರಾನ್ಸು ಮಿತ್ರರ ವಶವಾಗಿ ಜರ್ಮನರು ಒಂದು ಹಿಳ್ಳೆ ಸಹ ಇಲ್ಲದೆ ಫ್ರಾನ್ಸನ್ನು ಬಿಡಬೇಕಾಗುವದು. ಇದು ಸಫಲವಾದರೆ ಜರ್ಮನಿಗೆ ಸ್ವೆಯಿನಿನ ಸಂಬಂಧವು ತಪ್ಪುವದು. ಇಟೆಲಿಯ ಮೇಲೆ ಮಿತ್ರರ ವರ್ಚಸ್ಸು ಹೆಚ್ಚಾಗಿ ಬೀಳತೊಡಗುವದು. ಮಿತ್ರರು ಈಗ ಇಳಿದ ಪ್ರದೇಶದಿಂದ ಜರ್ಮನಿಗೆ ಬರೇ 400 ಮೈಲುಗಳ ದೂರವಿದೆ. ಆದ್ದರಿಂದ ಜರ್ಮನರು ಇಲ್ಲಿ ಮಿತ್ರರನ್ನು ಬಲಯುತವಾಗಿ ಎದುರಿಸದೆ ಇರರು. ಯಾಕೆಂದರೆ ಮಿತ್ರರು ದಿನೇ ದಿನೇ ಜರ್ಮನಿಯ ಹತ್ತಿರ ಬರತೊಡಗಿದ್ದಾರೆ. ಈ ಗಂಡಾಂತರದ ಸಮಯದಲ್ಲಿ ತಮ್ಮ ಶಕ್ತಿ ಪ್ರದರ್ಶನ ಮಾಡಿ ಉಳಿದುಕೊಳ್ಳುವ ಯತ್ನ ಮಾಡದಿದ್ದರೆ ಜರ್ಮನಿಯ ನಾಶವು ಶೀಘ್ರ ಸನ್ನಿಹಿತವಾಗದಿರದು.

ಮಿತ್ರರು ಈ ಹೊಸ ಧಾಳಿ ನಡಿಸಿದಾಗ ಜರ್ಮನರು ಕೈಕಟ್ಟಿ ಕೂತಿರಲಿಲ್ಲ. ಈ ಧಾಳಿಯು ಸುಳಿಸುಳಿ ಅವರಿಗೆ ಮೊದಲೇ ತಿಳಿದಿದ್ದು ನಾರ್ಮೆಲ್ಸ್ ಮೊದಲಾದ ನಗರಗಳನ್ನು ತೆರವು ಮಾಡಿದ್ದರಂತೆ. ಮಿತ್ರರ ಧಾಳಿಯನ್ನು ಎದುರಿಸಲು ಅವರೂ ಕಕ್ಕಸಿದ್ದತೆಗಳನ್ನು ಮಾಡಿಕೊಂಡಿರಬಹುದು. ಮಿತ್ರರಿಗೆ ಈ ಕಡೆಯಿಂದ ಮುಂದೆ ಸಾಗಲು ಕಷ್ಟವಿದೆ. ಗಿರಿ ಕಂದರಗಳನ್ನು ದಾಟ ಅವರು ಮುನ್ನಡೆಯಬೇಕಿದೆ. ಹೇಗೂ ಈ ಭಾಗದಲ್ಲಿ ಉಗ್ರ ಕದನದ ಚಿಹ್ನೆಗಳು ಶಾಣುಕ್ತಿವೆ. ಜರ್ಮನಿಯು ಅಪಜಯವನ್ನು ಪಡೆಯದಿದ್ದರೂ ಒಂದರ ಮೇಲೊಂದೆಂಬಂತೆ ಹೊಡೆತಗಳು ಬೀಳತೊಡಗಿವೆ. ಪೆಟ್ಟು ತಿಂದ ಹಾವು ಬುಸುಗುಟ್ಟುವಂತೆ ಹಿಟ್ಲರನು ತನ್ನ ಆಂತಿಮ ಅಸ್ತ್ರಗಳಿಗೆ ಕೈ ಹಾಕಿದ್ದಾನೆ. ಹಿಟ್ಲರನ ಪ್ರೇತ ಏಮಾನವು ಮಿತ್ರರಿಗೆ ಅಗಾಧ ಭಯ ಮೂಡುತ್ತಿದೆ. ಗಂಟೆಗೆ 350 ಮೈಲು ವೇಗವಾಗಿ ಹೋಗುವ ಈ ಮಿಸೂಳವು ಒಂದು ಗಂಟೆಯಲ್ಲಿ 7 ನೂರು ಮನೆಕ್ಷಳಂತೆ ನಾಶ ಮಾಡುತ್ತಿದೆಯಂತೆ. ಈ ಗುಪ್ತಾಸ್ತ್ರಗಳ ಹಾಗೂ ಜರ್ಮನಿಯ ಶಕ್ತಿಯ ಫಲ ನಿರ್ಣಯ ಬೇಗ ಆಗಲಿದೆ.

ಒಳದೇಶ.

ಕೊಡಗು ಪ್ಲಾಂಟರುಗಳ ಸಂಘದ ಮತ್ತು ಇಂಡಿಯನ್ ಪ್ಲಾಂಟರುಗಳ ಸಂಘದ ಸದಸ್ಯರಲ್ಲದ ಇತರ ಪ್ಲಾಂಟರುಗಳು ಮತ್ತು ಬತ್ತ ವ್ಯವಸಾಯೇಗಾರರು ತಮಗೆ ಬೇಳಾದ ಹಿಂಡಿ ಗೊಬ್ಬರದ ಪರಿಮಾಣವನ್ನು ನಮೂದಿಸಿ ತಾ. 15-9-44 ರೊಳಗೆ ಜೀಫ್ ಕಮಿಷನರ ಆಫೀಸಿಗೆ ಅರ್ಜಿಮಾಡಿಕೊಳ್ಳಬಹುದೆಂದೂ ಮೇಲ್ಕಂಡ ಎರಡು ಸಂಘಕ್ಕೆ ಸಂಬಂಧಿಸಿದವರು ಆಯಾಯ ಸಂಘದ ಗೌರವ ಕಾರ್ಯದರ್ಶಿಗಳಿಗೆ ಬರೆದುಕೊಳ್ಳಬೇಕೆಂದೂ ತಿಳಿಸಿರುವರು.

ಮಡಿಕೇರಿಯಲ್ಲಿ ಪ್ಲೇಗು ಸುರುವಾಗಿದೆ. ಒಬ್ಬನಿಗೆ ಈಗಾಗಲೇ ತಗಲಿದೆ, ಇಲಿಗಳೂ ಸಾಯುತ್ತಿವೆ; ಆದ್ದರಿಂದ ಮಡಿಕೇರಿ ನಿವಾಸಿಗಳೆಲ್ಲರೂ ದಾಕುಹಾಕಿಸಿಕೊಳ್ಳಬೇಕೆಂದೂ, ಮಡಿಕೇರಿಯ ಹೊರಗೆ ಆಹಾರಪದಾರ್ಥಗಳನ್ನು ಅವುಗಳನ್ನು ಒಣಗಿಸಿದ ಅಧಿಕಾರ ಪತ್ರವಿಲ್ಲದೆ ವ್ಯಾಪಾರಿಗಳು ತೆಗೆದುಕೊಂಡು ಹೋಗಕೂಡದೆಂದೂ, ಇನ್ನಿಯ ನಿವಾಸಿಗಳು ಹೊರಗೆ ಹೋಗಲು ದಾಕುಹಾಕಿದ ಪರ್ಮಿಟ್ಟು ಬೇಕೆಂದೂ ಪ್ರಕಟಿಸಲಾಗಿದೆ.

ನಿಯಂತ್ರಿತ ಬೆಲೆಗಿಂತಾ ಹೆಚ್ಚಿನ ದರಕ್ಕೆ ಕಾಗದ ಮೂರಿದುದರಿಂದ ಮಡಿಕೇರಿಯ ಶ್ರೀ ಕೋದೆಂಡಿ ಎಂಬ ವ್ಯಾಪಾರಸ್ಥರಿಗೆ ರೂ. 35 ಜುಲ್ಮಾನೆ ವಿಧಿಸಲಾಗಿದೆ.

ತೋಟದಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಹರಿಜನ ಆತನ ಹೆಂಡತಿ, ಒಂದು ಹುಡುಗಿ ಮತ್ತು 14 ದಿನದ ಒಂದು ಮಗು ಇವರನ್ನು ಕಾಯಿಲೆಯಿಂದ ಕೆಲಸ ಮಾಡಲು ನಿಶಕ್ತರಾದ ಕಾರಣ ತೋಟದಿಂದ ಹೊರಪಡಿಸಲು ಅವರು ಮೂವರೂ ದಾರಿಯಲ್ಲಿ ಪಡೆಯುಲಾರದೆ ಮಡಿಕೇರಿಯ ತಾಳತ್ತಮನೆಯ ಹತ್ತಿರ ತಮ್ಮ ಮಗುವನ್ನು ಬಿಸಾಡಿದರೆಂದೂ, ಅಳುತ್ತಿದ್ದ ಮಗುವನ್ನು ಹತ್ತಿರವಿದ್ದವರು ತೆಗೆದುಕೊಂಡು ಹೋಗಿ ಅವರಿಗೆ ಕೊಟ್ಟು ಉಪಚರಿಸಿದರೂ ಮಗುವು ಸತ್ತುಹೋಯಿತೆಂದೂ ಕಾಯಿಲಸ್ಥರಾದ ಹರಿಜನ ದಂಪತಿಗಳಲ್ಲಿ ಗಂಡನು ಮೂರನೆ ದಿನ ಸತ್ತನೆಂದೂ ಹೆಣವನ್ನು ಬಿಟ್ಟು ಹೆಂಡತಿಯು ಹೋದಳೆಂದೂ, ಅವಳು ಸಾಯುವ ಸ್ಥಿತಿಯಲ್ಲಿದ್ದಳೆಂದೂ ವಾರ್ತೆ.

ಕೊಡಗು ಜಿಲ್ಲಾ ಬೋರ್ಡು ಮೀಟಿಂಗು.

ಕೊಡಗು ಜಿಲ್ಲಾ ಬೋರ್ಡಿನ ಮೀಟಿಂಗು ತಾ. 17-8-44 ರಲ್ಲಿ ಪ್ರೆಸಿಡೆಂಟರಾದ ಶ್ರೀ. ಸಿ. ಎಂ. ಪೂಣಚ್ಚನವರ ಅಧ್ಯಕ್ಷತೆಯಲ್ಲಿ ನಡೆಯಿತು. ಎಲ್ಲರು ಯೂರೋಪಿಯನ್ ಮೆಂಬರುಗಳು, ಶ್ರೀ. ಹೆಚ್. ಟಿ. ಮುತ್ತಣ್ಣ, ಮತ್ತು ಖಾನ್ ಸಾಹೇಬ್ ಅಬ್ದುಲ್ ರಹಮಾನ್ ಹಾಜರ ವಿನಹ ಎಲ್ಲ ಸದಸ್ಯರು ಹಾಜರಿದ್ದರು. ರಾಷ್ಟ್ರಗೀತೆಯ ನಂತರ ಆದ ತೀರ್ಮಾನಗಳಲ್ಲಿ ಈ ಕೆಳಗಿನವು ಮುಖ್ಯವಾದವು.

ಉಪಧ್ಯಾಯರ ತುಟ್ಟಿ ಬತ್ಯಕ್ಕಾಗಿ ರೂ. 24,000 ಕೊಡಲು ಇಂಡಿಯೂ ಸರಕಾರದ ಮಂಜೂರಾತಿಗೆ ಬರೆಯಲಾಗಿದೆಯೆಂತಲೂ, ಯೋಗ್ಯವಾಗಿ ಕೆಲಸ ನಡೆಯದ ಒಬ್ಬರೇ ಉಪಾಧ್ಯಾಯರಿರುವ ಮತ್ತು ಗ್ರಾಂಟ್ ಇನ್ ಎಯಿಡ್ ಶಾಲೆಗಳನ್ನು ಜಿಲ್ಲಾ ವಿದ್ಯಾಧಿಕಾರಿಗಳ ಸೂಚನೆಯಂತೆ ಮುಚ್ಚಿದರೆ ಮಾತ್ರ ಈ ಹಣವನ್ನು ಕೊಡಲಾಗುವದೆಂದೂ ಬಂದ ಜೀಫ್ ಕಮಿಷನರ ಪತ್ರ ಓದಲಾಗಿ ವಿದ್ಯಾಧಿಕಾರಿಗಳ ಶಿಫಾರಸ್ಸುಗಳು ಬಂದ ಮೇಲೆ ಆಲೋಚಿಸಲಾಗುವದೆಂದೂ ತೀರ್ಮಾನಿಸಲಾಯಿತು.

ಸರಕಾರಿ ಉದ್ಯೋಗಿಗಳಿಗೆ ಈಗ ಕೊಡುತ್ತಿರುವ ತುಟ್ಟಿ ಬತ್ಯದ ದರದಂತೆ ಜಿಲ್ಲಾ ಬೋರ್ಡು ಉದ್ಯೋಗಿಗಳಿಗೂ ಕೊಡಲು ಬೇಕಾಗುವ ಹಣವನ್ನು ಸರಕಾರದಿಂದ ಕೊಡಲು ಕೇಳಲಿಕ್ಕಾಗಿ ಬೋರ್ಡಿನ ಪ್ರೆಸಿಡೆಂಟರು, ವೈಸ್‌ಪ್ರೆಸಿಡೆಂಟರು, ಶ್ರೀ. ಎಸ್. ಎನ್. ರಾಮಶೆಟ್ಟರು, ಶ್ರೀ. ಕೆ. ಯಂ. ಕುಶಾಲಪ್ಪನವರಿಂದ ಕೂಡಿದ ನಿಯೋಗ ಗೋಷ್ಠಿಯೊಂದನ್ನು ಜೀಫ್ ಕಮಿಷನರನ್ನು ಕಂಡು ಮಾತಾಡುವಂತೆ ನಿಶ್ಚಯಿಸಲಾಯಿತು. ಸರಕಾರಿ ಮೆಂಬರುಗಳು ಇದಕ್ಕೆ ವಿರೋಧಿಸಿದರು.

ಬೋರ್ಡಿನವರು ವಿದ್ಯಾರ್ಥಿನಿಲಯವನ್ನು ಹ್ಞಾಕಬೇಕೋ ಯಾ ಬೇಡವೋ ಎಂಬ ವಿಚಾರ ಆಲೋಚನೆಗಾಗಿ ಅವಶ್ಯವಿದ್ದರೆ ಮತದಾರರ ಅಭಿಪ್ರಾಯವನ್ನು ಸಹ ತೆಗೆದು ವರ್ಧಿಸಿಮಾಡಲು ಬೋರ್ಡಿನ ಪ್ರೆಸಿಡೆಂಟರು, ವೈಸ್‌ಪ್ರೆಸಿಡೆಂಟರು, ಶ್ರೀ. ಎಸ್. ಎನ್. ರಾಮಶೆಟ್ಟರು, ಶ್ರೀ. ಕೆ. ಯಂ. ಕುಶಾಲಪ್ಪನವರು ಮತ್ತು ಜಿಲ್ಲಾ ವಿದ್ಯಾಧಿಕಾರಿಗಳಿಂದ ಕೂಡಿದ ಉಪಸಮಿತಿಯನ್ನು ನೇಮಕಮಾಡಲಾಯಿತು.

ಮೋಟಾರು ವಾಹನಗಳ ತೆರಿಗೆಯ ಆರ್ಥಿಕನಂತೆ ಸರಕಾರಕ್ಕೆ ಬರುವ ಉತ್ಪತ್ತಿಯ ಅರ್ಧದಷ್ಟನ್ನು ಬೋರ್ಡಿಗೆ ವಂತಿಗೆ ಕೊಡುವಂತೆ ಸರಕಾರವನ್ನು ಕೇಳಲು ತೀರ್ಮಾನಿಸಿ, ಮೇಲಿನ ನಿಯೋಗಗೋಷ್ಠಿಯವರೇ ಈ ವಿಚಾರ ಚೀಫ್ ಕಮಿಷನರನ್ನು ಕಾಣಲು ತೀರ್ಮಾನಿಸಲಾಯಿತು.

ಬಾಳೆಲೆ ಆಸ್ಪತ್ರೆಗೆ ಡಾಕ್ಟರರನ್ನು ಬೇಗನೆ ಕಳುಹಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳಲು ತೀರ್ಮಾನಿಸಲಾಯಿತು.

ಶ್ರೀ. ಎಸ್ ಎನ್. ರಾಮಶೆಟ್ಟರು ಫ್ರೇಜರ್‌ಪೇಟೆಯಲ್ಲಿ ಕಟ್ಟಿಸಿರುವ ವಾರ್ಡ್ ಕಟ್ಟಡಕ್ಕೆ ಬೇಕಾದ ಅಡಿಗೆಮನೆ ಮತ್ತು ಸಾಮಾನುಗಳನ್ನು ಸಹ ಶ್ರೀ. ರಾಮಶೆಟ್ಟರೇ ಕೊಡಬೇಕೆಂದು ಬೋರ್ಡಿನವರು ಕೇಳಿಕೊಂಡದ್ದಕ್ಕೆ ರಾಮಶೆಟ್ಟರು ಒಪ್ಪಿಗೆಯನ್ನಿತ್ತರು.

ಕಸ್ತೂರಿಬಾ ಸ್ಮಾರಕ ನಿಧಿಗೆ ರೂ. 200ನ್ನೂ. ಬಾಲಚಮೂ ದಳಕ್ಕೆ ರೂ 50ನ್ನೂ ಮಂಜೂರ್ತಿಡಲಾಯಿತು.

ಬತ್ತದ ಕ್ರಯವನ್ನು ಗಾಡಿಗೆ ರೂ 150 ಕ್ಕೆ ಏರಿಸಬೇಕೆಂದು ಸರಕಾರವನ್ನು ಕೇಳಲು ತೀರ್ಮಾನವಾಯಿತು.

ಕಸ್ತೂರಿ ಬಾ ಸ್ಮಾರಕ ನಿಧಿ.

ಶ್ರೀಯುತ ಮಂಡೇಪಂಡ ಸೋಮಯ್ಯ & ನಂಜಪ್ಪನವರು	150
ಮಿಸಸ್ ಕೊಡಂದೆರ್ಕಾರ್ಯಪ್ಪ ಗಂಗಮ್ಮನವರು (ಲಕ್ಕುಂದ)	101
ಶ್ರೀಯುತ ಮುಚ್ಚಂಡ ಚಂಗಪ್ಪನವರು	50
,, ಕೆ. ಬಿ. ಕುನ್ನಯ್ಯ	,, 25
,, ಮಚ್ಚರೂಡ ಮಂದಪ್ಪ	,, 25
,, ಕೆ. ಬಿ. ಸಿದ್ದಯ್ಯ	,, 10
,, ವಿ. ಎನ್. ಚಿನ್ನಯ್ಯ	,, 10
,, ಮುಕ್ಕಾಟಿರ ಮೊಣ್ಣಯ್ಯ	,, 10
,, ಕೊಂಗೆಟ್ಟಿರ ಪೊನ್ನಪ್ಪ	,, 10

5. ರೂ. ಕೊಟ್ಟವರು.

ಶ್ರೀಯುತ ಯು. ಯಂ. ಕೃಷ್ಣರಾವ್‌ರವರು ಮತ್ತು ಶ್ರೀಮತಿ ಪಿ. ಎಂ. ಕಾವೇರಮ್ಮನವರು.

ಶ್ರೀ ಸಿ. ಪಿ. ಸದಾಶಿವೈಯ್ಯರವರು ರೂ. 3

ಚೆಟ್ಟಿರ ಪೊನ್ನಣ್ಣಯ್ಯನವರು ರೂ. 3

2 ರೂ. ಕೊಟ್ಟವರು.

ಶ್ರೀ ಹೆಚ್. ವೆಂಕಟರಮಣಯ್ಯ, ಯಂ. ಅಂತೋಣಿ, ಏ ಹೆಚ್ ಪೊನ್ನಪ್ಪ, ಕೆ ಹಸನಬ್ಬ ಮಂಡೇಪಂಡ ಪೊನ್ನಪ್ಪ, ಬದ್ದಂಡ ಪೊನ್ನಪ್ಪ, ಕಾವಾಡಿಕಂಡ ಐ ಮೊಣ್ಣಪ್ಪ, ಮಿಸಸ್ ಕಾಳಂಡ ಕುಟ್ಟಪ್ಪ ಮತ್ತು ಮಿಸಸ್ ಕುಕ್ಕೆರ ಏ ಗಂಗಮ್ಮ ಇವರುಗಳು,

1 ರೂ. ಕೊಟ್ಟವರು.

ಶ್ರೀಗಳಾದ ಕೋರಂಡ ಕುಶಾಲಪ್ಪ, ಕೋರಂಡ ತಿಮ್ಮಯ್ಯ, ಮಚ್ಚರಂಡ ಉತ್ತಪ್ಪಯ್ಯ, ಹೆಚ್ ಮೊಯಿದ್ದೀನ್‌ಚ್ಚಾರಿ, ಏ ತಿಂಗರಾಜ, ಎಸ್ ರಾಘವೇಂದ್ರ ಇವರುಗಳು, ಈ ವರೆಗೆ ರೂ. 6,620 ಜಮೆಯಾಗಿದೆ.

ಣಭೇರಿ.

ವಿಶ್ವರು ಯೂರೋಪಿನ ದಂಡ
ಶಕ್ತಿಯನ್ನು ಕೈಕೊಂಡು ವಿಳಂಬ ವಾ
ಳದನ್ತ. ಈ ವರೆಗೆ ಮಿತ್ರರ ನು
ತಿಯು ಮಂದಗತಿಯಿಂದ ಸಡೆ
ಬರುತ್ತಿತ್ತು. ಆದರೆ ಈ ವಾರ ಬಹು
ವ್ಯ ರೀತಿಯಿಂದ ಮಿತ್ರರೂ ಮುಂ
ನುಗ್ಗುತ್ತಿರುವಂತೆ ಕಂಡುಬರುತ್ತ

ಮುಂದೆ ಬರುವ ಎರಡು ವಾರ
ಗು ನಾರ್ಮಂಡಿಯು ಕದನದಲ್ಲಿ ಕೀ
ಕಷ್ಟವ್ಯಾಯವಾದ ವಾರಗಳೆಂದು
ಟಿಷ್ ತಜ್ಞರೊಬ್ಬರು ಅಭಿಪ್ರಾಯ
ಟ್ಟಿದ್ದಾರೆ. ನಿಜ, ಜರ್ಮನ್ನರು ತ
ತ್ಮ ಸರ್ವಶಕ್ತಿಯನ್ನು ಉಪಯೋಗಿ
ಹೋರಾಡತೊಡಗಿದ್ದಾರೆ. ಬರು
ವ ವಾರಗಳಲ್ಲಿ ಅವರ ಬಲಪರೀಕ್ಷೆ
ದು ಆಗಬಹುದು. ಮಿತ್ರರು ಈ
ವಾರದಲ್ಲಿ ಬಹು ಮಟ್ಟಿಗೆ ಮುಂದರಿದಿ
ರುವರು. ಜನರಲ್ ಐಸೆನ್‌ಹೋವರ
ಅಮೇರಿಕನ್ ಸೈನ್ಯವು ಸೆಂಟ್ ಲೋ
ದ ದಕ್ಷಿಣದಲ್ಲಿ ಶತ್ರುವ್ಯೂಹವನ್ನು
ಭೇದಿಸಿದೆ. ಮಿತ್ರರ ಟ್ಯಾಂಕುಗಳು,
ಶಸ್ತ್ರಬಂಡಿಗಳು ಮುಂದೆ ನುಗ್ಗತೊಡ
ಗಿವ ಬ್ರೆಸ್ಟ್ ದ್ವೀಪಕಲ್ಪವನ್ನು ಕ
ತ್ತರಿಸಿ ಹಾಕಿ ಬ್ರಿಟಾನಿ ಪ್ರಾಂತವನ್ನು
ಹಾಯಿಸಿ ಹೋಗತೊಡಗಿದ್ದಾರೆ. ಈ
ಪ್ರಾಂತದ ರಾಜಧಾನಿಯೂದ ರೆನ್ನೆಸ್
ಮಿತ್ರರ ವಶವಾಗಿದೆ. ಇದು ಕೆರ್‌ಬ
ರ್‌ನಿಂದ ನೂರು ಮೈಲುಗಳ ದೂರದ
ಲ್ಲಿದೆ. ಬ್ರಿಟಾನಿಯದ ಪಶ್ಚಿಮಭಾಗ
ದಲ್ಲಿ ಮಿತ್ರಸೇನೆಗಳು ಒಂದೊಂದಾಗಿ
ನಗರಗಳನ್ನು ಆಕ್ರಮಿಸುತ್ತಾ ಮುಂ
ದೆ ಸಾಗಿವೆ. ಈ ರೀತಿ ಈ ಭಾಗದ
ಸೇನೆಗಳ ಕಾರ್ಯಾಚರಣೆಯೂದರೆ ಅ
ತ್ಯ ಪ್ರಚಂಡ ಸೇನೆಯೊಂದು ರೆನ್ನೆಸ್
ನ್ತಗರದಿಂದ ಪೂರ್ವಾಭಿಮುಖವಾಗಿ
ಪ್ಯಾರಿಸಿನ ಕಡೆಗೆ ಸಾಗುತ್ತಿದೆ. ಇಲ್ಲಿ
ಮಿತ್ರರ ಐದು ದಳಗಳು ಒಂದುಗೂಡಿ
ಮುಂದೆ ಸಾಗುವ ಹಂಚಿಕೆಯಾಗಿದೆ.
ಜರ್ಮನರ ಏಳನೆ ದಳವು ಈ ಭಾಗದ
ಲ್ಲಿದೆ; ಪ್ಯಾರಿಸ್ ನಗರವು ಕೇವಲ ನೂ
ರು ಮೈಲುಗಳ ದೂರದಲ್ಲಿರುವದಾಗಿ
ಅಂದಾಜು ಮಾಡಲಾಗಿದೆ. ಜರ್ಮ
ನರು ಜೀವದ ಆಶೆಕೊರೆದು ದೀಪದ
ಮೇಲೆರಗುವ ಪತಂಗಗಳಂತೆ ಮುನ್ನು
ಗ್ಗಿ ಆತ್ಮಬಲಿದಾನ ಕೊಡುತ್ತಿದ್ದಾರೆ.
ಬ್ರಿಟಾನಿಯದಲ್ಲಿ 3400 ಜನ ಜರ್ಮ
ನರು ಶರಣ್ಣಿರಬಹುದೆಂದೂ, ಸುಮಾರು
15,000 ಸೆರೆಸಿಕ್ಕಿರಬಹುದೆಂದೂ ಅಂ
ದಾಜು ಮಾಡಲಾಗಿದೆ. ಜರ್ಮನ್
ಸೇನಾನಾಯಕರಾದ ರೋಮೆಲ್, ವಾ
ನ್‌ಕ್ಲೂಜ್ ಮೊದಲಾದವರು ಕೇನ್
ನಗರದ ಭಾಗದಲ್ಲಿ ಬಲವಾಗಿ ತಳವೂ
ರಿದರೆ ಪ್ಯಾರಿಸ್, ಬರ್ಲಿನ್ ಮೊದಲಾ
ದುವು ಸುರಕ್ಷಿತವಾಗುವದೆಂದು ಅರಿತು
ತಮ್ಮ ಸೇನೆಗಳನ್ನು ಅಲ್ಲಿ ಕೇಂದ್ರೀಕರಿ
ಸಿರುವರು. ಆದರೆ ಮಿತ್ರರು ದಕ್ಷಿಣ
ಭಾಗದಿಂದ ಮೇಲ್ಕಂಡ ನಗರಗಳಿಗೆ
ಗಂಡಾಂತರ ತಂದಿದ್ದಾರೆ. ಜರ್ಮನ್
ದಳಪತಿ ವಾನ್‌ಕ್ಲೂಜನು ಸಧಾಂಡ
ವ್ಯಕ್ತಿಯಲ್ಲ. ಆತನ ಕೈಳಿಗೆ ಬಲ
ಯುತವಾದ ಸೇನೆಗಳು ಇನ್ನೂ ಇವೆ.
ಮಿತ್ರರ ಕಡೆಯಲ್ಲಿ ಜನರಲ್ ಐಸೆನ್
ಹೂವರರೂ ಫ್ರಾನ್ಸಿನಲ್ಲಿ ತಳವೂರಿ ಸೈ
ನ್ಯಚಾಲನೆಗೆ ತೊಡಗಿದ್ದಾರೆ. ಈ ಎ
ರಡೂ ಅಪ್ರತಿಮ ಯುದ್ಧ ವೀರರ ಚಾ
ತುರ್ಯವು ಮುಂದೆ ಇಲ್ಲಿಯ ರಂಗದ
ಲ್ಲಿ ಹೊರಬೀಳಲಿದೆ.

ಪೂರ್ವದಲ್ಲಿ ರಷ್ಯನರು ಪ್ರಶ್ಯಾ
ದ ಮೇಲೆ ಕಾಲಿಟ್ಟು ಮುಂದರಿಯು
ತ್ತಿರುವರು. ನಾಲ್ಕಿಂಗಳ ಭೂಮಿಯ
ಲ್ಲೇ ಇಂದು ಅವರ ರಕ್ತವು ಚೆಲ್ಲಲ್ಪ
ಡುತ್ತಿದೆ. ಪೂರ್ವ ಪ್ರಶ್ಯಾದ ದಂಡ
ಯಾತ್ರೆ ಇನ್ನೂ ವಿಶಾಲವಾಗಿ ನಡೆದಿ
ಲ್ಲ. ರಷ್ಯನರು ತಕ್ಕ ಸಿದ್ಧತೆ ಮಾಡಿ
ಕೊಳ್ಳುತ್ತಿರುವರು. ಇತ್ತ ಪೋಲೆಂ
ಡ್ ಗಡಿಯಲ್ಲಿ ರಷ್ಯನರು ಮುಖ್ಯ ನ
ಗರ ವಾರ್ಸಾವನ್ನು ಹಿಡಿದು ಮುಂ
ದೆ ಸಾಗಿದ್ದಾರೆ. ಈ ಮುಖ್ಯೆ ಜರ್ಮ
ನಿ ಮತ್ತು ರಷ್ಯಾಗಳೊಳಗೆ ಒಪ್ಪಂದ
ದ ಮಾತುಕತೆಯೂಗುತ್ತಿದೆಯೆಂಬು
ವಾರ್ತೆಯಿತ್ತು. ಜರ್ಮನಿಯ ಹಿ
ಟ್ಲರನು, ಬ್ರಿಟಿಷರೇ ತನ್ನ ಪರಮ ಶ
ತ್ರುವೆಂದೂ ಕೂಲಿಕಾರರ ಮೇಲೆ ಕೈ
ಮಾಡುವ ಇಚ್ಛೆ ತನಗಿಲ್ಲವೆಂದೂ ಹೇ
ಳಿರುವನು. ರಷ್ಯಾದ ಸ್ಟಾಲಿನನಾದ
ರೂ ಸ್ವತಂತ್ರ ಜರ್ಮನ್ ಸಮಿತಿಯ
ನ್ನು ಸ್ವಲ್ಪ ಗೌರವದಿಂದ ಕಂಡಿರುವ
ನು. ಇದರ ಮೇಲೆ ಊಹನೆಗಳನ್ನು
ಕಟ್ಟಿ ರಷ್ಯಾ ಜರ್ಮನರನ್ನು ಸಂಧಾನ
ವಾಗಬಹುದೆಂದು ಊಹಿಸಲಾಗಿತ್ತು.
ರಷ್ಯಾಕ್ಕೆ ಮಿತ್ರಪಕ್ಷದವರ ಬಂಡವಳ
ಶಾಹೀನೀತಿ ಒಪ್ಪುವದಿಲ್ಲವೆಂಬುದು ನಿ
ಜ. ಆದರೆ ಇಷ್ಟರಿಂದಲೇ ಮಿತ್ರರೊ
ಡನೆ ತಾನು ಮಾಡಿಕೊಂಡಿರುವ ಕರಾ
ರು ಕೌಲುಗಳನ್ನು ಮುಂದು ರಷ್ಯವು
ಜರ್ಮನಿಯೊಡನೆ ಒಪ್ಪಂದ ಮಾಡಿ
ಕೊಂಡೀತೆ?

ಅಂತು ಜರ್ಮನಿಗೆ ರಷ್ಯಾದ ಕ
ಡೆಯಿಂದ ಬಲವಾದ ಪೆಟ್ಟು ಬಿದ್ದು ಜ
ರ್ಮನಿಯು ಕಸುವೇ ದಿನೇ ದಿನೇ ಕ್ಷೀ
ಣಿಸುತ್ತಿದೆ. ಇತ್ತ ಫ್ರಾನ್ಸಿನಲ್ಲೂ ಆಶಾ
ಕಿರಣಗಳು ಕಂಡು ಬರುವದಿಲ್ಲ. ಜ
ರ್ಮನ್ ಜನತೆಯಲ್ಲಿ ಈ ಪರಿಸ್ಥಿತಿಯಿಂ
ದಾಗಿ ನಿರಾಶೆಯುತ್ಪನ್ನವಾಗುತ್ತಿರಲಿ
ಕ್ಕೆ ಸಾಕು. ಇಂಥಾ ನಿರಾಶೆಯನ್ನು
ಹುಟ್ಟಿಕ್ಕಿ ಜರ್ಮನರಲ್ಲಿ ಜೈತನ್ಯವನ್ನು
ಧ್ವಂಸಿಸಲು ಡಾ. ಗೇಬಲ್ಸನು ಹೊಸ
ಸೂದರಿಯೊಂದನ್ನು ಕಂಡುಕೊಂಡಿ
ದ್ದಾನೆ. ಇದೀಗ ಒಂದರ ನಂತರ
ಒಂದೆಂಬಂತೆ ಗುಪ್ತಾಸ್ತ್ರಗಳನ್ನು ಜೊ
ರಗೆಡಹುತ್ತಿದ್ದಾನೆ. ಜರ್ಮನಿಯ ವಿ
ಜ್ಞಾನ ಕರ್ಮಾಲೆಯಲ್ಲಿ ಇನ್ನೂ
ಹೊಸ ಹೊಸ ಅಸ್ತ್ರಗಳು ತಯಾರಾಗಿ
ನಿಂತಿವೆಯೆಂದೂ ಹೇಳತೊಡಗಿದ್ದಾನೆ.
ನಿಜ, ಇಡೀ ಜಗತ್ತೆ ಬೆರಗುಗೊಳ್ಳುವ
ಗುಪ್ತಾಸ್ತ್ರಗಳನ್ನು ಕಂಡುಹಿಡಿದು ಪ್ರ
ಯೋಗಿಸುತ್ತಿರುವ ಜರ್ಮನರ ಬುದ್ಧಿ
ಯನ್ನು ಶಕ್ಯವೂ ಹೊಗಳಲೇ ಬೇಕು.
ಆದರೆ ಈ ಗುಪ್ತಾಸ್ತ್ರಗಳಿಂದಲೇ ಜ
ಯವನ್ನುಂಪಾದಿಸುವದು ಸಾಧ್ಯವೇ ಎಂ
ಬ ದನ್ನು ಮುಂದೆ ನೋಡಬೇಕಾಗಿದೆ.

ಇಟೆಲಿ ರಂಗದಲ್ಲಿಯೂವ ಚಟುವ
ಟಿಕೆಯೂ ಕಂಡುಬರುವದಿಲ್ಲ.

ಬರ್ಮಾ ಯುದ್ಧವನ್ನು ಅವಲೋ
ಕಿಸಿದರೆ ಜಪಾನರ ಆಶೆಯೆಲ್ಲಾ ಮ
ಣ್ಣುಗೂಡಿದಂತೆ ಕಂಡುಬರುತ್ತದೆ.
ಮೂರು ತಿಂಗಳ ಹಿಂದೆ ಹೆಮ್ಮೆಯಿಂದ
ಹಿಂದೂದೇಶದ ಮೇಲೇರಿಬಂದ ಜಪಾ
ನರು ಬಾಲ ಮುದುಡಿಕೊಂಡು ಹಿಂ
ದೆ ಸಾಗುವ ಹುಲಿಯಂತೆ ಹಿಂದೂಸ್ಥಾ
ನದಿಂದ ಕಾಲ್ದೆಗೆದಿದ್ದಾರೆ. ಆದರೂ
ಹಿಂದೂಸ್ಥಾನದಲ್ಲಿ ಜಪಾನರು ಇ
ನ್ನೂ ಇದ್ದಾರೆ. ಬರ್ಮಾಗಡಿಯಿಂದ
ಸುಮಾರು 12 ಮೈಲು ಒಳಗಿನ ಪ್ರ
ದೇಶವು ಇನ್ನೂ ಜಪಾನರ ಕೈಯಲ್ಲಿದೆ.
ಉತ್ತರ ಬರ್ಮಾದಲ್ಲಿ ಮಿತ್ರರ ಕೈಮೇ
ಲಾಗಿದೆ. ಜಪಾನರ ಮಂತ್ರಿಮಂಡಳ
ಬದಲಾದೊಡನೆ ಸ್ಥಿತಿ ಬದಲಾದೀತೆಂ
ದು ಹಲವರು ಊಹೆಯಿತ್ತು. ಆದರೆ
ಬರ್ಮಾಗಡಿಯು ಪರಿಸ್ಥಿತಿ ಹಾಗೆಯೇ
ಇದೆ. ಅದರೆ ಚೈನಾದಲ್ಲಿ ಜಪಾನರ
ಕೈ ಬಹು ಬಿಗಿದುಬಿಗಿದಿದೆಯೆಂದು ವಾ
ರ್ತೆ ಬಂದಿದೆ. ಚೈನಾವನ್ನು ಮೊದ
ಲು ಮುಗಿಸಿ ಮುಂ[illegible]ಯೋಚನೆವಾ
ಡುವ ಅಭಿಪ್ರಾಯವನ್ನು ಜಪಾನು
ಮಂತ್ರಿಮಂಡಳವು [illegible]ಟ್ಟಿರಲೂ ಸಾ
ಕು. ಆದ್ದರಿಂದಲೆ [illegible]ರ್ಮಾಭಾಗದ
ಯುದ್ಧವನ್ನು ಸಂಪೂರ್ಣವಾಗಿ ಗೆಲ್ಲಬಹು
ದು. ಹೇಗೂ ಸಧ್ಯಕ್ಕೆ ಜರ್ಮಾಗಡಿ
ಯ ಪರಿಸ್ಥಿತಿ ತೃಪ್ತಿಕರವಿದೆ.

SHORT TENDER NOTICE.

Coorg Public Works Department

Metalling the Bettageri–Nalknad road between Kottamudi and Kaklabe Causeways from 9/5 to 17/5.

Sealed tenders will be received by the Divisional Officer Coorg Division, at his office at Mercara up to 4-30 P. M. on 30-8-44 for metalling the Bettageri–Nalknad road 9/5 to 17/5.

The tender should be in the prescribed form obtainable from the Divisional Officer. The detailed tender notice, schedule of quantities and the tender form will be available in the Divisional Office on payment of Rs. 2/- per each set.

C. B. MANNADIAR,
Divisional Officer,
29-7-44. P. W.D., Coorg.

—೦೦—

ಬಹಿರಂಗ ಹರಾಜು.

ಮಡಿಕೇರಿ ನಾಡು ಗಾಳಿಬೀಡು. ಗ್ರಾಮದಲ್ಲು ಇರುವ ಮೂದಿರ ಮಲೆ 490 ವಿಕರೆಯಲ್ಲು ಇರುವ ಹಾಲಿ ವರ್ಷದ ಇಲಾಚಿ ಫಲವನ್ನು ಬರಿವ ತಾರೀಕು 25ನೇ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ಮಡಿಕೇರಿ ನಾಡು ಕಚೇರಿಯ ಮುಂದೆ ಹರಾಜು ಮಾಡಲ್ಪಡುವುದು.

ಎನ್. ಎಂ. ಕರುಂಬಯ್ಯ,
ರೇಂಜ್ ಆಫೀಸರ್,
ಫ್ರೇಜರ್‌ಪೇಟೆ.

—೦೦—

ನೋಟೀಸು.

ಅಮ್ಮತ್ತಿನಾಡು ಬೈರಂಬಾಡ ಗ್ರಾಮದಲ್ಲಿರುವ ಕಂಡ್ರೆಯಿಂದ ಚಿಣ್ಣಪ್ಪನು ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ–

ತಾ. 18-7-44ರಲ್ಲು ಮಚ್ಚಂಡ ಚಂಗಪ್ಪನವರು ಈ ಪೈಕಿಯಲ್ಲಿ ಪ್ರಕಟಿಸಿದ ನೋಟೀಸಿನಲ್ಲಿ ಸಮೂದಿಸಿರುವ ಸಂಗತಿಗಳಲ್ಲಿ ಏನೊಂದೂ ನಿಜವಿರುವುದಿಲ್ಲ. ಬೈರಂಬಾಡ ಗ್ರಾಮದಲ್ಲಿರುವ ಜಮ್ಮಾಕಾಡನ್ನು ತಾ 7-6-1939ರಂದು [illegible] ಹರಾಜಿನಲ್ಲು ಪಡೆದು [illegible] ಕ್ಷಿಣ ಆಸ್ತಿಗಳಾಗಿವೆ [illegible] ಧೀನ ಇರುವುದಾಗಿದೆ. ಸದರಿ ಆಸ್ತಿಗಳಲ್ಲು ಚಂಗಪ್ಪನವರಿಗೆ ಏನೂ ಹಕ್ಕಿಲ್ಲವೆಂದು ಹೇಳಿಕೊಳ್ಳುವುದಿಲ್ಲ. ಸದರಿ ಆಸ್ತಿಗಳಲ್ಲಿನ ಮರವನ್ನು ವಿಕ್ರಯಿಸಲು ಎಂದೂ ಪ್ರಯತ್ನಿಸಿಲ್ಲ.

ಈಗ್ಗೆ ಚಂಗಪ್ಪನವರು ನಿಜವಲ್ಲದ ಹೇಳಿಕೆಗಳ ಪ್ರಕಟಣೆ ಹೊರಡಿಸಿ, ತನ್ನ ಪರವಾಗಿ ಹಕ್ಕು ಪಡೆಯಲು ಮಾಡಿರುವ ಪ್ರಯತ್ನದಲ್ಲಿ ಏನೊಂದೂ ನಿಜಾಂಶವಿರುವುದಿಲ್ಲವೆಂದು ಈ ಮೂಲಕ ಸದರಿ ಪ್ರಕಟಣೆಯ ಅಂಶಗಳನ್ನು ಸಂಪೂರ್ಣವಾಗಿ ನಿರಾಕರಿಸಲಾಗಿದೆ.

ಕೆ. ಎ. ಚಿಣ್ಣಪ್ಪ.
25-7-44. ಬೈರಂಬಾಡ.

—೦೦—

ಸಾರ್ವಜನಿಕರಲ್ಲಿ ವಿನಂತಿ.

ದಿವಂಗತರಾದ ನನ್ನ ತಂದೆ ಅಪ್ಪಚ್ಚನವರ ಜ್ಞಾಪಕಾರ್ಥವಾಗಿ 'ನೆರವಂಡ ಅಪ್ಪಚ್ಚು' ಎಂಬ ಬೋರ್ಡನ್ನೇ ಇಟ್ಟು ನಡಿಸಿಕೊಂಡು ಬರುವ ಕಿವುಳಿ ಅಂಗಡಿಯನ್ನು ಮಡಿಕೇರಿ ಪೈನಿಯರ್ ರೋಡಿನಲ್ಲು ನಾನು ಹೊಸದಾಗಿ ಕಟ್ಟಿಸಿರುವ ಅಂಗಡಿ ಮನೆಯಲ್ಲು ಇಟ್ಟು ತಾ. 17-8-44ರಿಂದ ವ್ಯಾಪಾರ ಮಾಡಲಾಗುತ್ತಿದೆ. ಅತ್ಯುತ್ತಮವಾದ ಹೊಸ ಮೂಲಗಳನ್ನು ತರಿಸಿ, ಸಿರಾಕಗಳ ತೃಪ್ತಿಯನ್ನೇ ಧ್ಯೇಯವಾಗಿಟ್ಟು ಕಾರ್ಯ ಪ್ರಾರಂಭಿಸಿದ್ದೇನೆ. ಈ ವರೆಗೆ ನನ್ನಲ್ಲಿ ವ್ಯಾಪಾರಮಾಡಿ ನನ್ನನ್ನು ಪ್ರೋತ್ಸಾಹಿಸಿದ ಬಂಧು ಮಿತ್ರರೂ, ಸಾರ್ವಜನಿಕರೂ ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ನನ್ನ ವಿನೀತ ಕೇಳಿಕೆ.

ನೆರವಂಡ ಎ. ಉತ್ತಪ್ಪ,
ತಾ. 17-8-44. ಮಡಿಕೇರಿ.

—೦೦—

ಗಾಂಧಿ ಜಿನ್ನಾ ಮಿಟಿಂಗು.

ಗಾಂಧಿ-ಜಿನ್ನಾರವರ ಭೇಟಿಯು ತಾ. 19 ರಲ್ಲಿ ಬೊಂಬಾಯಿಯಲ್ಲಿಯ ಬ್ಯಾರಿಸ್ಟರ್ ಜಿನ್ನಾರವರ ಮನೆಯಲ್ಲಿ ನಡೆಯಿತು. ಗಾಂಧೀಜಿಯವರು ವರ್ಧಾದಿಂದ ತಾ. 17 ರಲ್ಲಿ ಬೊಂಬಾಯಿಗೆ ಹೋಗಿರುವರು. ಇವರು ಜಿನ್ನಾರವರ ಭೇಟಿಗೆ ಹೋಗುವ ಮೊದಲು ದೇಶದ ಎಲ್ಲಾ ಮುಂದಾಳುಗಳ ಅಭಿಪ್ರಾಯ ತೆಗೆದುಕೊಳ್ಳುತ್ತಿದ್ದಾರೆ. ಸರ್ ತೇಜಬಹದೂರ್ ಸಪ್ರೂರವರು ಗಾಂಧಿಯವರನ್ನು ಕಂಡು ಮಾತಾಡಿದ್ದಾರೆ. ಜಯಕರ್‌ರವರು ಬೊಂಬಾಯಿಯಲ್ಲಿ ಗಾಂಧಿಯವರನ್ನು ಕಾಣಲಿದ್ದಾರೆ. ಮುಸ್ಲಿಮರ ಪಾಕಿಸ್ಥಾನ ನೀತಿಯನ್ನು ಒಪ್ಪಿದ್ದಾದರೆ ಬಂಗಾಳವು ಎಂಥಾ ಗಂಡಾಂತರಕ್ಕೆ ತುತ್ತಾಗುವದೆಂಬುದನ್ನು ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಗಾಂಧೀಜಿಯವರನ್ನು ಕಂಡು ಮಾತಾಡಿದ್ದಾರೆ. ಅಖಿಲ ಭಾರತ ಹಿಂದೂ ಮಹಾಸಭೆಯು ರಾಜಾಜಿಯವರ ಶರತುಗಳನ್ನು ಠೀಕಿಸಿ ತಾವು ಪಾಕಿಸ್ಥಾನದ ಶರತಿನ ಮೇಲಾಗುವ ಒಪ್ಪಂದವನ್ನು ಮೈಯಲ್ಲಿ ರಕ್ತವಿರುವ ವರೆಗೆ ವಿರೋಧಿಸುವೆವೆಂದು ಸಾರಿದ್ದಾರೆ. ಸಿಖರು ಈ ಸಂಧಾನಕ್ಕೆ ತಮ್ಮ ವಜ್ರ ಕಂಠದ ನಿಶೇಧವನ್ನು ಒಡ್ಡಿದ್ದಾರೆ. ಬಂಗಾಳ ಕಾಂಗ್ರೆಸ್ ಮುಂದಾಳು ಕಿರಾನ್ ಶಂಕರರಾಯರೂ ಇದನ್ನು ವಿರೋಧಿಸಿದ್ದಾರೆ. ರಾಜಾಜಿಯವರ ಶರತುಗಳನ್ನು ಸಾಧಾರಣ ಇನ್ನುಳಿದ ಕಾಂಗ್ರೆಸಿಗರು ಒಪ್ಪಿ ಬೆಂಬಲಕೊಟ್ಟಿದ್ದಾರೆನ್ನಬಹುದು. ಹೀಗೆ ದೇಶದ ಉದ್ದಗಲಕ್ಕೂ ಸಾರ್ವತ್ರಿಕವಾದ ಅಲ್ಲೋಲಕಲ್ಲೋಲವಾಗಿದ. ಗಾಂಧೀಜಿಯವರು ಈ ಒಪ್ಪಂದದಿಂದ ಯಾವ ಪಕ್ಷಕ್ಕೂ ಅನ್ಯಾಯವಾಗದಂತೆ ನೋಡಿಕೊಳ್ಳಲಾಗುವದೆಂದು ಆಶ್ವಾಸನವಿತ್ತು ಸಂಧಾನಕ್ಕಾಗಿ ಪ್ರಯತ್ನಿಸುತ್ತಿದ್ದಾರೆ. ಹೀಗೆಲ್ಲಾ ಸಂಗತಿಗಳಿದ್ದರೂ ಗಾಂಧಿ ಜಿನ್ನಾ ಭೇಟಿಯು ಫಲಕಾರಿಯಾಗಲಾರದೆಂದು ಸಂಶಯವು ಹೆಚ್ಚಿದೆ. ಸರ್. ತೇಜ್‌ಬಹದ್ದೂರ್ ಸಪ್ರೂರವರೇ, 'ನಾವು ಅವರ ಕೇಳಿಕೆಗಳನ್ನು ಸಲ್ಲಿಸಿದಷ್ಟೂ ಜಿನ್ನಾರವರು ತಮ್ಮ ಬೇಡಿಕೆಗಳನ್ನು ಹೆಚ್ಚಿಸುತ್ತಾ ಈ ವರೆಗೆ ನಡೆದು ಬಂದಿರುವರು. ಆದರಿಂದ ಈ ಸಂಧಾನದಲ್ಲಿಯೂ ಫಲದೊರೆಯುವದು ಕಠಿಣ' ಎಂದಿದ್ದಾರೆ. ಇದೇ ಸಂದೇಹವನ್ನು ಮುಸ್ಲಿಂ ಮಜ್ಲಿಸ್ ಅಧ್ಯಕ್ಷ ಶೇಖ್‌ಮಹಮ್ಮದ್ ಖಾನರೂ ವ್ಯಕ್ತಮಾಡಿದ್ದಾರೆ. ಜಿನ್ನಾರವರು ಪ್ರಾಂತಗಳ ಪ್ರತ್ಯೇಕೀಕರಣದ ವಿಷಯವನ್ನು ಲೀಲೆಯು ಮುಸ್ಲಿಂ ಮತಗಣನೆಯಿಂದ ನಿರ್ಣಯಿಸತ್ಯಾಯಮಾಡಬಹುದೆಂದು ಊಹಿಸಲಾಗಿದೆ. ಜಿನ್ನಾರವರು ರಾಜಾಜಿಯವರ ಸೂಚನೆಗಳನ್ನು ಬರೇ ಠೀಕಿಸಿರುವರೇ ವಿನಹ ತನ್ನ ಪ್ರತಿ ಸೂಚನೆಗಳನ್ನು ಮೂಡಿಲ್ಲವಾದ ಕಾರಣ ಸಂಧಾನ ಸಮಯದಲ್ಲಿ ಅವರು ಯಾವ ಶರತುಗಳನ್ನು ಮುಂದಿಡುವರೆಂದು ಹೇಳಲಾಗುವದಿಲ್ಲ. ಜಿನ್ನಾರವರ ಮುಖ ಪತ್ರಿಕೆಯಾದ 'ಡಾನ್' ಎಂಬ ಪತ್ರಿಕೆಯು ಒಂದು ಅಗ್ರಲೇಖನ ಬರೆದು ಪಾಕಿಸ್ಥಾನದ ಭದ್ರತೆ ಮತ್ತು ಆರ್ಥಿಕ ಸುರಕ್ಷಿತತೆಯ ದೃಷ್ಟಿಯನ್ನಿಟ್ಟುಕೊಂಡು ಪಾಕಿಸ್ಥಾನದ ಗಡಿಗಳನ್ನು ನಿರ್ಣಯಿಸಬೇಕೆಂಬ ಒಂದು ಹೊಸ ಸೂಚನೆಯನ್ನು ಮಾಡಿದೆ. ಈ ರೀತಿಯ ಸೂಚನೆಗಳು ಗಾಂಧಿ-ಜಿನ್ನಾ ಭೇಟಿಯ ಕಾಲಕ್ಕೆ ಒಂದೂ ಜಿನ್ನಾರವರು ಅವುಗಳನ್ನು ಮಂಗಮಾಯೆಯಿಂದ ಹಿಡಿದು ನಿಲ್ಲುವದಾದರೆ ಸಂಧಾನವು ಸಫಲವಾಗುವ ಚಿಹ್ನೆಗಳು ಮೂಲೆ ಸೇರುವವು.

ನಿಮಗೆ ಗೊತ್ತೇ?

ಚೈನಾ ದೇಶಧರಸು ತಾನು ಆರೋಗ್ಯವಂತನಾಗಿರುವಾಗ ಮೂತ್ರ ತನ್ನ ವೈದ್ಯರಿಗೆ ಸಂಬಳ ಕೊಡುತ್ತಿದ್ದನಂತೆ. ಆತನಿಗೆ ಕಾಯಿಲೆ ಬಂತೆಂದರೆ ವೈದ್ಯರ ಸಂಬಳಕ್ಕೆ ಸೊನ್ನೆ ಬಿತ್ತೆಂದರ್ಥ. ನೋಜಿಗವಾಗಿ ಅವನಷ್ಟು ಆರೋಗ್ಯವಂತರು ಪ್ರಪ್ಥಿಯಲ್ಲೇ ಇರಲಿಲ್ಲವಂತೆ.

ಚೀನೀಯರ ಕೆಲವು ಪದ್ಧತಿಗಳು ಬಹು ವಿನೋದಕರವಾಗಿವೆ. ಇಲ್ಲೆ ನೋಡಿ.—

ಚೈನಾದಲ್ಲಿ ಜೋಣಿಗಳು ಕುದುರೆಗಳಿಂದ ಎಳೆಯಲ್ಪಡುವವು.

ವೃದ್ಧಿಯೇ ಸಮೃದ್ಧ ಆರಾಧಕ ವಸ್ತುಗಳು. ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ಹೇಗೆ ಸುಂದರಿಯರೇ ಸಮೃದ್ಧ ವಸ್ತುಗಳೋ ಚೈನಾದಲ್ಲಿ ವೃದ್ಧೆಯರೇ ಆರಾಧಕ ವಸ್ತುಗಳು.

ವೃದ್ಧರು ಎಳೆಯ ಮಕ್ಕಳಂತೆ ಗಾಳಿ ಪಟಗಳನ್ನು ಹಾರಿಸುವುದು, ಚೆಂಡಾಡುವುದು ಇವುಗಳಲ್ಲಿ ಕಾಲಹರಣೆ ಮಾಡುತ್ತಾರೆ. ಚೀನಿಯರ ಮುಖ್ಯ ಕಾಂಕ್ಷೆ ಏನೆಂದರೆ, ತಾನು ಮೃತಿ ಹೊಂದಿದ ಮೇಲೆ, ಹೆಣವನ್ನು ತುಂಬಲಿಕ್ಕೆ ಒಂದು ಒಳ್ಳೆಯ ಪೆಟ್ಟಿಗೆಯನ್ನು ಉಪಯೋಗಿಸಬೇಕು. ಮತ್ತು ಜನರು ತನಗೆ ವಿಜೃಂಭಣೆಯಾದ ಭೂಸ್ಥಾಪನೆಯನ್ನೀಯಬೇಕು.

ಗಂಡಸರು ಉದ್ದವಾದ ಜಾಕೀಟುಗಳನ್ನು ಧರಿಸಿ ಕೈಯ್ಯಲ್ಲಿ ಬೀಸಣಿಗೆಗಳನ್ನು ಧರಿಸುತ್ತಾರೆ. ಹೆಂಗಸರು ಸಣ್ಣ ಅಂಗಿಗಳನ್ನು ಧರಿಸಿ ಕೈಯ್ಯಲ್ಲಿ ಬೆತ್ತವನ್ನು ಹಿಡಿಯುತ್ತಾರೆ. ಗಂಡಿಗೂ ಹೆಣ್ಣಿಗೂ ಪೂರ್ಣ ಪರಿಚಯವಿದ್ದಲ್ಲಿ ವಿವಾಹವು ವಿಶೇಷ ಸಲ್ಪಡುತ್ತದೆ. ಚೀನೀಯನು ತನ್ನೂರಿನ ಹೆಣ್ಣನ್ನು ಮದುವೆಯಾಗುವುದಿಲ್ಲ.

ಚೀನೀಯನು ಮತ್ತೊಬ್ಬನನ್ನು ಸಂಧಿಸಿದರೆ ತನ್ನ ಕೈಯ್ಯನ್ನೇ ಅಲ್ಲಾಡಿಸಿಕೊಂಡು ಹಿಸುಕಿಕೊಳ್ಳುತ್ತಾನೆ. ಬಹಳ ಹಳೆಯ ಸ್ನೇಹಿತನನ್ನು ಕಂಡರೆ ಇಬ್ಬರೂ ಬೇಸರವಾಗುವ ವರೆಗೆ ಭುಜಗಳನ್ನು ಉಜ್ಜಿಕೊಳ್ಳುತ್ತಾರೆ. ಮನೆಗೆ ಬಂದವರನ್ನು ಊಟಕ್ಕೆಬ್ಬಿಸಲು ಚೀನೀಯರು ಇಷ್ಟಪಟ್ಟರೆ "ಊಟಕ್ಕೆ ಬಾ" ಎಂದು ಹೇಳುವುದಿಲ್ಲ. ಆತನು ತನಗೆ ಬೇಡದಿದ್ದರೆ "ದಯವಿಟ್ಟು ಭೋಜನಕ್ಕೆ ಏಳಿ" ಎಂದು ಹೇಳುತ್ತಾನೆ. ಸಾಹುಕಾರರು ತಮ್ಮ ಸೇವಕರಿಗೆ ಚೈನಾ ದೇಶದಲ್ಲಿ ಸಂಬಳ ಕೊಡುವುದಿಲ್ಲ. ಆದರೂ ಅಲ್ಲಿ ಕೆಲಸಕ್ಕೆ ಜನಗಳು ಹಾತೊರೆಯುತ್ತಾರೆ. ಸಾಧಾರಣ ಜನರಿಗೆ ಸೇವಕರು ಬೇಕಾದಲ್ಲಿ ಅವರು ಯಥೇಚ್ಛವಾದ ಸಂಬಳ ಕೊಡಬೇಕಾಗುವುದು. ಚೀನೀಯನು ತನ್ನ ಗಂಡುಮಗನ ಆಧಾರದ ಮೇಲೆ ಬೇಕಾದಷ್ಟು ಹಣವನ್ನು ಸಾಲ ಪಡೆಯಬಹುದು. ಆದರವರು ತನ್ನ ನೂರಾರು ಹೆಣ್ಣುಮಕ್ಕಳನ್ನು ಆಧಾರವಿಡುತ್ತೇನೆಂದರೂ ಮೂರು ಕಾಸು ಸಾಲ ಹುಟ್ಟುವುದಿಲ್ಲ.

ಮೂರಾಟಕ್ಕಿದೆ.

ಮಡಿಕೇರಿ ಸ್ಕೂಲ್ ರಸ್ತೆಯಲ್ಲಿ ಉಳುವಾರನ ಲೇಟ್ ಅಪ್ಪಯ್ಯನವರ ಮಕ್ಕಳು ಗಣಪತಿ, ಮೂದಯ್ಯನವರ ಹೆಸರಿನಲ್ಲಿ ಜಮಾಬಂದಿ ನಡೆದುಬರುವ ಈ ಕೆಳಗಿನ ಸೊತ್ತುಗಳು ವಿಕ್ರಯಿಸಲ್ಪಡುತ್ತವೆ.

ಒಂದು ಬಂಗ್ಲೆ, ಅಡಿಗೆ ಮನೆ, ಔಟ್ ಹೌಸ್, ಕಕ್ಕಸ್ ಮನೆ, ಪಂಪು, ಬಾವಿ ಸಹ ಇವೆ.

ಖರೀಸ್ ಪಡುವವರು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆದು ಯಾ ಕುದ್ದು ವಿಚಾರಿಸಿ ತಿಳಿದು ಕೊಳ್ಳಬಹುದು.

'X'
C/o. "ಕೊಡಗು",
4-2 ಮಡಿಕೇರಿ.

WANTED.

An Estate writer w the knowledge of Accou ancy and type writing a salary of Rs. 50/- w dearness allowance of Rs 15/- per month. An inc ment of Rs. 5/- per ye will be given on the mer of the work turned ou Free accomodation will l given.

For further particlua please apply to:—

P. Kunhi Kannan,
Perumbubetta Estate,
8-6 POLLIBETTA.

ಎಂಪೈರ್ ಆಫ್ ಇಂಡಿಯಾ
ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

36)- ಸ್ಥಾಪನೆ:—೧೮೯೫.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	೯೭,೩೭,೦೦೦ ರೂ. ಮೀರಿದೆ.
	ಚಾಲ್ತಿಯಿರುವ ವಿಮೆಗಳು	೬,೪೪,೪೪,೦೦೦ ,, ,,
	ಆಸ್ತಿ	೬,೫೦,೪೬,೦೦೦ ,, ,,
ಕಂಪೆನಿಯ ಅದಿಯಲ್ಲಿ ಕೊಟ್ಟ ಕ್ಲೈಮುಗಳು		೬,೫೮,೦೦,೦೦೦ ,, ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೊಂಬಾಯಿ

"ಟ್ರಾಪಿಕಲ್"
ಕಂಪೆನಿಯಲ್ಲಿ ವಿಮೆ ನೂಡುವದೇ

ಯೋಗ್ಯನೆಂದು ನಿಮ್ಮ **1944** ರ ತೀರ್ಮಾನವಾಗಲಿ

1943ರಲ್ಲಿ ಮಾಡಿದ ವಿಮೂ ಮೌಲ್ಯ ರೂ. 91,99,125.

ಹಿಂದೂದೇಶದ ಹಿರಿದಾದ್ದ ರಾಷ್ಟ್ರೀಯ ಕಂಪೆನಿ.

ಮುಖ್ಯ ಖಚೇರಿ: ಹೊಸ್ದಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತಿಗೆ ಬರೆಯಿರಿ:-

ಯಂ. ಯು. ಅಚ್ಚಣ್ಣ, ಮಡಿಕೇರಿ. } ಅಥವಾ { ಯಂ. ರಂಗನಾಥಶೆಟ್ಟಿ ಬ್ರಾಂಚ್ ಮೇನೇಜರ್, ಮಂಗಳೂರು.

31)

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿ., ಮಡಿಕೇರಿ

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ

ವಸೂಲಾದ ಶೇರ್ ಮೊಬಲಗು 95,060, ಜಮಾಬಂದ ರೇವಣಾತಿ 2,24,755, ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ರೇವಣಾತಿಗಳಿಗೆ 1 ವರ್ಷದಿಂದ 3 ವರ್ಷಗಳ ವರೆಗೆ ಶೇಕಡ 2. 3 ವರ್ಷಗಳಿಂದ 5 ವರ್ಷಗಳ ವರೆಗೆ 2½. 5 ವರ್ಷಗಳಿಂದ 10 ವರ್ಷಗಳ ವರೆಗೆ 3½. 10 ಮತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇ 0-8-0

ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.